ಚಿತ್ರದುರ್ಗ ಜಿಲ್ಲೆಯ ಮಧ್ಯೆ ಬರುವ ಕಳ್ಳಂಬೆಳ್ಳದ ಹತ್ತಿರ ಸ್ಥಾಪಿಸಲು ಚಿತ್ರದುರ್ಗ ಪೋಲಿಸ್ ವರಿಷ್ಠರ ವಶಕ್ಕೆ ನೀಡಲಾಗಿದೆ. ಇದೇ ರೀತಿ ರಾಷ್ಟ್ರೀಯ ಹೆದ್ದಾರಿ-4 ರಲ್ಲಿ ಬರುವ ಕೋಲಾರ ಜಿಲ್ಲೆಯ ಮುಳಬಾಗಿಲು ಮತ್ತು ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ತಲಾ ಒಂದರಂತೆ ಮತ್ತು ಬಳ್ಳಾರಿ - ಬಿಜಾಪುರ ಹೆದ್ದಾರಿಯಲ್ಲಿ ಒಂದನ್ನು ಒಟ್ಟು ಮೂರು ಕ್ರೇನ್ ಮತ್ತು ಮೂರು ಆಂಬುಲೆನ್ಸ್‌ಗಳನ್ನು ಖರೀದಿಸಲು ಸರ್ಕಾರದ ಪರಿಶೀಲನೆಯಲ್ಲಿದೆ.

ಸಾರಿಗೆ ಖಾಸಗೀಕರಣ

541 (505) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಿಸುವ ಯೋಜನೆ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ ಖಾಸಗೀಕರಿಸುವ ಜಿಲ್ಲೆಗಳನ್ನು ಗುರುತಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಇದರಿಂದ ಎಷ್ಟು ಜನ ಉದ್ಯೋಗವನ್ನು ಕಳೆದುಕೊಳ್ಳುತ್ತಾರೆ;

ಈ) ಇವರಿಗೆ ಬದಲೀ ವ್ಯವಸ್ಥೆಗೆ ಸರ್ಕಾರವು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬಳ್ಳಾರಿ ವ್ಯವಸಾಯ ಉತ್ಪನ್ನ ಮಾರುಕಟ್ಟೆಗೆ ಮೀಸಲಿಟ್ಟ ನಿವೇಶನದ ಬಗ್ಗೆ

544 (818) ಶ್ರೀ ಎಂ. ದಿವಾಕರ್‌ಬಾಬು (ಬಳ್ಳಾರಿ): ಮಾನ್ಯ ಕೃಷಿ ಮಾರು ಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ವ್ಯವಸಾಯ ಉತ್ಪನ್ನ ಮಾರುಕಟ್ಟೆಗೆ ಮೀಸಲಿಟ್ಟ ನಿವೇಶನದ ಅಳತೆ ಎಷ್ಟು; ಹಾಗೂ ನಿವೇಶನ ಮಂಜೂರು ಮಾಡಲಾಗಿದೆಯೇ;

ಆ) ಅದರಲ್ಲಿ ಹಮಾಲುಗಳಿಗೆ ಹಾಗೂ ಎತ್ತಿನ ಗಾಡಿ ಎಳೆಯುವವರಿಗೆ ವಸತಿ ಸೌಕರ್ಯಕ್ಕಾಗಿ ಪ್ರತ್ಯೇಕ ಜಾಗ ಒದಗಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಎಷ್ಟು ಜಾಗವನ್ನು ಹಮಾಲರುಗಳಿಗೆ ಹಾಗೂ ಎತ್ತಿನಗಾಡಿ ಎಳೆಯುವವರಿಗೆ ವಸತಿಗಾಗಿ ಮಂಜೂರಾತಿ ಮಾಡಲಾಗಿದೆಯೇ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಮಾರುಕಟ್ಟೆ ಪ್ರಾಂಗಣಕ್ಕಾಗಿ 103.12 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು ಇದರಲ್ಲಿ ವಿವಿಧ ಅಳತೆಯ 256 ನಿವೇಶನಗಳನ್ನು ರೂಪಿಸಲಾಗಿದೆ. ಈ ಪೈಕಿ 190 ನಿವೇಶನಗಳನ್ನು ಪೇಟೆ ಕಾರ್ಯಕರ್ತರಿಗೆ ಹಂಚಲಾಗಿದೆ.

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲಾ.

ಬಳ್ಳಾರಿ ನಗರಸಭೆಗೆ ನೈಸರ್ಗಿಕ ವಿಕೋಪದಡಿ ಅನುದಾನ ಬಿಡುಗಡೆ

545 (500) ಶ್ರೀ ಎಂ. ದಿವಾಕರಬಾಬು (ಬಳ್ಳಾರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996ನೇ ವರ್ಷದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ ಬಳ್ಳಾರಿಯ ರಸ್ತೆಗಳು ಪೂರ್ಣವಾಗಿ ಹಾನಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಳ್ಳಾರಿ ನಗರಸಭೆಯು ರಸ್ತೆ ದುರಸ್ಥಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಪ್ರಕೃತಿ ವಿಕೋಪದ ಅನುದಾನದಡಿಯಲ್ಲಿ ರೂ. 93.00 ಲಕ್ಷಗಳನ್ನು ಕೇಳಿರುವುದೇ?

ಇ) ಹಾಗಿದ್ದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಬಳ್ಳಾರಿ ನಗರದಲ್ಲಿ 18.00 ಕಿ.ಮೀ ರಸ್ತೆ ಹಾನಿಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೌದು.

ಇ) ಪ್ರಸಕ್ತ ಸಾಲಿನಲ್ಲಿ ಪ್ರವಾಸ ಪರಿಹಾರ ಕಾರ್ಯಗಳಿಗಾಗಿ ಬಳ್ಳಾರಿ ಜಿಲ್ಲೆಗೆ ರೂ 146.40 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಬಳಿ ಲಭ್ಯವಿರುವ ಹಣದಲ್ಲಿ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಕೃಷಿ ಮಾರುಕಟ್ಟೆ ಅಭಿವೃದ್ಧಿ ಯೋಜನೆಯಲ್ಲಿ ಬಿಡುಗಡೆಯಾದ ಹಣ

546 (850) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಕೃಷಿ ಮಾರುಕಟ್ಟೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಅಭಿವೃದ್ಧಿ ಯೋಜನೆಯಲ್ಲಿ ರಾಜ್ಯ ಸರ್ಕಾರವು ಎಷ್ಟು ಅನುದಾನ ಬಿಡುಗಡೆ ಮಾಡಿದೆ;